<u>ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>

ಸಿ.ಸಿ.ನಂಃ 90/2017 ಸಿ.ಡಬ್ಲ್ಯೂ –11 ಪಿ.ಡಬ್ಲ್ಯೂ -07

| | | |
|---|---|---|
| ಹೆಸರು | ಃ | ಕಾಶಿಬಾಯಿ |
| ತಂದೆಃ ಗಂಡ | ಃ | ಶ್ರೀಮಂತ |
| ವಯಸ್ಸು | ಃ | ೬೦ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಗುಳ್ಳೊಳ್ಳಿ ತಾಂಡಾ |

ದಿನಾಂಕಃ ೨೦.೦೨.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**<u>ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ</u>**

ಆರೋಪಿ ಪರಿಚಯ ಇರುತ್ತದೆ. ಚಾಸಾ-೧ ನನ್ನ ಪತಿ, ಚಾಸಾ-೮, ೧೦ ನನ್ನ ಮಕ್ಕಳು, ಚಾಸಾ-೯ ನನ್ನ ಸೊಸೆ, ಚಾಸಾ-೨ ರಿಂದ ೭, ೧೨ ರಿಂದ ೧೫ರವರ ಪರಿಚಯ ಇರುತ್ತದೆ.

ನನ್ನ ಮಗ ಎಂದಿನಂತೆ ಬೆಳಿಗ್ಗೆ 9.00 ಗಂಟೆಗೆ ಪಡಸಾವಳಿ ಗ್ರಾಮಕ್ಕೆ ಕೂಲಿ ಕೆಲಸಕ್ಕೆ ಹೋಗಿದ್ದನು. ಕೂಲಿ ಕೆಲಸ ಮುಗಿಸಿಕೊಂಡು ಸಾಯಂಕಾಲ 6.30 ಗಂಟೆಗೆ ಬರುತ್ತಿರುವಾಗ ಶಕಾಪೂರ ಬ್ರಿಡ್ಜ ಹತ್ತಿರ ಮೋಟರ ಸೈಕಲನಲ್ಲಿ ಎಣ್ಣೆ ಖಾಲಿಯಾದ ಕಾರಣ ಪಕ್ಕದಲ್ಲಿ ತನ್ನ ಮೋಟರ ಸೈಕಲ ನಿಲ್ಲಿಸಿ ಫೋನಿನಲ್ಲಿ ಮಾತನಾಡುತ್ತಿರುವಾಗ ಸಿಮೆಂಟ ತುಂಬಿದ ಟ್ಯಾಂಕರ್ ವಾಹನ ಪಡಸಾವಳಿ ಕಡೆಯಿಂದ ಬಂದಿರುತ್ತದೆ. ಆಳಂದ ಕಡೆಯಿಂದ ಒಂದು ಲಾರಿ ಬಂದಿರುತ್ತದೆ. ಅವು ಎರಡೂ ಲಾರಿಗಳು ಎದುರು ಬದುರು ಆಗಿ ನನ್ನ ಮಗ ಫೋನಿನಲ್ಲಿ ಮಾತನಾಡುತ್ತಾ ನಿಂತಾಗ ಅಪಘಾತಪಡಿಸಿರುತ್ತದೆ. ಸದರಿ ಅಪಘಾತವನ್ನು ಚಾಸಾ-೧೩ ರವರು ನೋಡಿ ಅಂಬುಲೆನ್ಸಗೆ ಕರೆ ಮಾಡಿರುತ್ತಾರೆ, ಪೋಲಿಸರಿಗೂ ಕರೆ ಮಾಡಿರುತ್ತಾರೆ. ನಾವು ಮೃತ ಮಗನ ನಂಬರಗೆ ಕರೆ ಮಾಡಿದಾಗ ಆ ಫೋನನ್ನು ಪೋಲಿಸರು ಎತ್ತಿ ನಿಮ್ಮ ಮಗನಿಗೆ ಅಪಘಾತವಾಗಿರುತ್ತದೆ ಅವನು ಉಳಿಯುವ ಸ್ಥಿತಿಯಲ್ಲಿ ಇಲ್ಲ ಎಂದು ಬೇಗ ಬನ್ನಿ ಎಂದು ಹೇಳಿದರು. ನಾನು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ, ಅಷ್ಟರಲ್ಲಿ ಅಂಬುಲೆನ್ಸ ಮೂಲಕ ನನ್ನ ಮಗನನ್ನು ಬಸವೇಶ್ವರ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನಾವು ಬಸವೇಶ್ವರ ಆಸ್ಪತ್ರೆಗೆ ಹೋದೆವು, ಅಲ್ಲಿ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಗಂಗಾಮಾಯಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು, ಆದಕಾರಣ ನಾವು ಗಂಗಾಮಾಯಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿಯೂ ಸಹ ಕೂಡ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಹೈದರಾಬಾದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು, ನಾವು ಹೈದರಾಬಾದ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವಾಗ ಹಾದಿಯಲ್ಲಿಯೇ ರಾತ್ರಿ 2.30 ಗಂಟೆಗೆ ತೀರಿಕೊಂಡಿರುತ್ತಾನೆ.

ಬೆಳಿಗ್ಗೆ ಪೋಲಿಸರು ಪೋಸ್ಟ ಮಾರ್ಟ ಮಾಡಿ ಮೃತ ದೇಹವನ್ನು ಕೊಟ್ಟಿರುತ್ತಾರೆ, ನಂತರ ನಾವು ವಿದಿವತ್ತಾಗಿ ನಮ್ಮ ತಾಂಡಾದಲ್ಲಿ ಅಂತ್ಯ ಸಂಸ್ಕಾರ ಮಾಡಿರುತ್ತೇವೆ. ನಂತರ ಅಪಘಾತಪಡಿಸಿದ ವಾಹನವನ್ನು ಪೋಲಿಸರು ಕಂಡು ಹಿಡಿದಿರುತ್ತಾರೆ. ನಂತರ ಪ್ರಕರಣ ದಾಖಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.06.02.2016 ರಂದು ನನ್ನ ಮಗ ಮೋಟರ್ ಸೈಕಲ ನಂ. ಎಂ.ಹೆಚ್.04-ಟಿ-7931 ರ ಮೂಲಕ ಕೆಲಸಕ್ಕೆ ಹೋಗಿದ್ದನು ಮರಳಿ ಬರುತ್ತಿರುವಾಗ ಟ್ಯಾಂಕರ್ ಲಾರಿ ನಂ. ಎಂ.ಹೆಚ್.12-ಕೆಪಿ-9635 ರ ಚಾಲಕನು ಅಪಘಾತಪಡಿಸಿರುತ್ತಾನೆ ಎಂದರೆ ಸರಿ. ಸದರಿ ಚಾಲಕನು ಅತಿ ಜೋರಾಗಿ ನಿರ್ಲಕ್ಷತನದಿಂದ ಓಡಿಸಿಕೊಂಡು ಅಪಘಾತಪಡಿಸಿರುತ್ತಾನೆ ಎಂದರೆ ಸರಿ. ಸದರಿ ಅಪಘಾತವು ಶಕಾಪೂರ ಬ್ರಿಡ್ಜ ಮಧ್ಯದಲ್ಲಿ ಆಗಿರುತ್ತದೆ ಎಂದರೆ ಸರಿ ಅಲ್ಲ, ಪಕ್ಕದಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಪಘಾತದಿಂದ ಮೃತ ನನ್ನ ಮಗನಿಗೆ ಮುಖಕ್ಕೆ, ತಲೆಗೆ, ಬಲ ಹಣೆಗೆ, ಬಲ ರಟ್ಟೆಗೆ ತೀವ್ರ ಸ್ವರೂಪದ ಗಾಯಗಳಾಗಿದ್ದವು ಎಂಥರೆ ಸರಿ. ದಿ.07.02.2016 ರಂದು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ. ಮತ್ತೆ ಪೋಲಿಸರು ದಿ,23.03.2016 ರಂದು ಠಾಣೆಗೆ ಕರೆಯಿಸಿ ಅಪಘಾತಪಡಿಸಿದ ಚಾಲಕನನ್ನು ತೋರಿಸಿ ಸುರೇಶ ತಂದೆ ಕಿಶಣ ಬೋಸಗೆ ಎಂದು ಹೇಳಿರುತ್ತಾರೆ ಎಂಧರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಎಸ್.ಎನ್. ವಕೀಲರಿಂದ**

ಮೃತ ನನ್ನ ಮಗನಿಗೆ ಮೋಟರ್ ಸೈಕಲ್ ನಡೆಸಲು ಚಾಲನಾ ಪರವಾನಿಗೆ ಇತ್ತೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಮೃತ ನನ್ನ ಮಗನನ್ನು ಕಲಬರುಗಿ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಅಪಘಾತ ಪರಿಹಾರ ಧನ ಪಡೆದುಕೊಳ್ಳುವುದಕ್ಕೋಸ್ಕರ ಕಲಬುರಗಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ ಅಲ್ಲ, ಆಳಂದ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯೇ ಸದರಿ ಅಪಘಾತಪಡಿಸಿದ್ದಾನೆ ಎಂದು ನಿಮಗೆ ಪೋಲಿಸರು ಹೇಳಿದ ನಂತರ ಗೊತ್ತಾಯಿತಾ ಎಂದರೆ ಸಾಕ್ಷಿ ನಮಗೆ ಮೊದಲೇ ಗೊತ್ತಿತ್ತು ನಂತರ ಪೋಲಿಸರು ಹೇಳಿದ ಮೇಲೆಯೂ ಗೊತ್ತಾಯಿತು ಎಂದು ನುಡಿಯುತ್ತಾರೆ. ಅಪಘಾತ ನಡೆದ ೨೦-೨೫ ದಿನದ ನಂತರ ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿರುತ್ತಾರೆ. ಆರೊಪಿಯ ಹೆಸರು ಏನು ಎಂದು ನಾನು ಪೋಲಿಸರನ್ನು ವಿಚಾರಣೆ ಮಾಡಿರುತ್ತೇನೆ, ಆರೋಪಿಯನ್ನು ವಿಚಾರಣೆ ಮಾಡಿರುವುದಿಲ್ಲ. ಅಪಘಾಥವನ್ನು ಯಾರು ಪಡಿಸಿದ್ದಾರೆ ಹೇಗೆ ಪಡೆಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ ಅಲ್ಲ. ಅಪಘಾತ ಪರಿಹಾರವನ್ನು ಪಡೆದುಕೊಳ್ಳುವುದಕ್ಕೋಸ್ಕರ ಚಾಸಾ-೧ ರವರು ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎಂಧರೆ ಸರಿ ಅಲ್ಲ. ಪೋಲಿಸರು ನಾವು ಸಲ್ಲಿಸಿರುವ ಫಿರ್ಯಾದಿಗೆ ಸಹಾಯವಾಗಲಿ ಎಂದು ಖೊಟ್ಟಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ ಅಲ್ಲ.

ನನ್ನ ಮಗ ಎಂದಿನಂತೆ ಬೆಳಿಗ್ಗೆ 9.00 ಗಂಟೆಗೆ ಪಡಸಾವಳಿ ಗ್ರಾಮಕ್ಕೆ ಕೂಲಿ ಕೆಲಸಕ್ಕೆ ಹೋಗಿದ್ದನು, ಕೂಲಿ ಕೆಲಸ ಮುಗಿಸಿಕೊಂಡು ಸಾಯಂಕಾಲ 6.30 ಗಂಟೆಗೆ ಬರುತ್ತಿರುವಾಗ ಶಕಾಪೂರ ಬ್ರಿಡ್ಜ ಹತ್ತಿರ ಮೋಟರ ಸೈಕಲನಲ್ಲಿ ಎಣ್ಣೆ ಖಾಲಿಯಾದ ಕಾರಣ ಪಕ್ಕದಲ್ಲಿ ತನ್ನ ಮೋಟರ ಸೈಕಲ ನಿಲ್ಲಿಸಿ ಫೋನಿನಲ್ಲಿ ಮಾತನಾಡುತ್ತಿರುವಾಗ ಸಿಮೆಂಟ ತುಂಬಿದ ಟ್ಯಾಂಕರ್ ವಾಹನ ಪಡಸಾವಳಿ ಕಡೆಯಿಂದ ಬಂದಿರುತ್ತದೆ, ಆಳಂದ ಕಡೆಯಿಂದ ಒಂದು ಲಾರಿ ಬಂದಿರುತ್ತದೆ ಅವು ಎರಡೂ ಲಾರಿಗಳು ಎದುರು ಬದುರು ಆಗಿ ನನ್ನ ಮಗ ಫೋನಿನಲ್ಲಿ ಮಾತನಾಡುತ್ತಾ ನಿಂತಾಗಿ ಅಪಘಾತಪಡಿಸಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಅಪಘಾತವನ್ನು ಚಾಸಾ-೧೩ ರವರು ನೋಡಿ ಅಂಬುಲೆನ್ಸಗೆ ಕರೆ ಮಾಡಿರುತ್ತಾರೆ, ಪೋಲಿಸರಿಗೂ ಕರೆ ಮಾಡಿರುತ್ತಾರೆ, ನಾವು ಮೃತ ಮಗನ ನಂಬರಗೆ ಕರೆ ಮಾಡಿದಾಗ ಆ ಫೋನನ್ನು ಪೋಲಿಸರು ಎತ್ತಿ ನಿಮ್ಮ ಮಗನಿಗೆ ಅಪಘಾತವಾಗಿರುತ್ತದೆ ಅವನು ಉಳಿಯುವ ಸ್ಥಿತಿಯಲ್ಲಿ ಇಲ್ಲ ಎಂದು ಬೇಗ ಬನ್ನಿ ಎಂದು ಹೇಳಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ, ಅಷ್ಟರಲ್ಲಿ ಅಂಬುಲೆನ್ಸ ಮೂಲಕ ನನ್ನ ಮಗನನ್ನು ಬಸವೇಶ್ವರ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನಂತರ ನಾವು ಬಸವೇಶ್ವರ ಆಸ್ಪತ್ರೆಗೆ ಹೋದೆವು, ಅಲ್ಲಿ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಗಂಗಾಮಾಯಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು, ಆದಕಾರಣ ನಾವು ಗಂಗಾಮಾಯಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಅಲ್ಲಿಯೂ ಸಹ ಕೂಡ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಹೈದರಾಬಾದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ದಿ.06.02.2016 ರಂದು ನನ್ನ ಮಗ ಮೋಟರ್ ಸೈಕಲ ನಂ. ಎಂ.ಹೆಚ್.04-ಟಿ-7931 ರ ಮೂಲಕ ಕೆಲಸಕ್ಕೆ ಹೋಗಿದ್ದನು ಮರಳಿ ಬರುತ್ತಿರುವಾಗ ಟ್ಯಾಂಕರ್ ಲಾರಿ ನಂ. ಎಂ.ಹೆಚ್.12-ಕೆಪಿ-9635 ರ ಚಾಲಕನು ಅಪಘಾತಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಚಾಲಕನು ಅತಿ ಜೋರಾಗಿ ನಿರ್ಲಕ್ಷತನದಿಂದ ಓಡಿಸಿಕೊಂಡು ಅಪಘಾತಪಡಿಸಿರುತ್ತಾನೆ, ಸದರಿ ಅಪಘಾತವು ಶಕಾಪೂರ ಬ್ರಿಡ್ಜ ಪಕ್ಕದಲ್ಲಿ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಅಪಘಾತದಿಂದ ಮೃತ ನನ್ನ ಮಗನಿಗೆ ಮುಖಕ್ಕೆ, ತಲೆಗೆ, ಬಲ ಹಣೆಗೆ, ಬಲ ರಟ್ಟೆಗೆ ತೀವ್ರ ಸ್ವರೂಪದ ಗಾಯಗಳಾಗಿದ್ದವು, ದಿ.07.02.2016 ರಂದು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆಃ- ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ